ಸಿಮೆಂಟಿನ ಕೊರತೆ ಈಗ ಸರ್ವೇ ಸಾಮಾನ್ಯವಾಗಿದೆ. ಸಿಮೆಂಟಿನ ಕೊರತೆಯಿಂದಾಗಿ ನೀರು ಸರಬರಾಜಿನ ಕಾರ್ಯಾಕ್ರಮಗಳು ಬಹಳಷ್ಟು ಸ್ಥಗಿತಗೊಂಡಿದೆ ಎಂಬ ವಿಷಯವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ನಾನು ಇಚ್ಛಿಪಡುತ್ತೇನೆ. ಸಿಮೆಂಟಿನ ಪೂರೈಕೆಗೆ ಸರ್ಕಾರ ಬಹಳಷ್ಟು ಶ್ರಮ ವಹಿಸುತ್ತಿದ್ದು ಇದರ ಇಚ್ಛೆಪಡುತ್ತೇನೆ. ಸಿಮೆಂಟಿನ ಪೂರೈಕೆಗೆ ಸರ್ಕಾರ ಬಹಳಷ್ಟು ಶ್ರಮ ವಹಿಸುತ್ತಿದ್ದು ಇದರೆ ಪೂರೈಕೆ ಸಮರ್ಪಕವಾಗಿಲ್ಲ. ಆದಾಗ್ಯೂ ಸಾಧ್ಯವಾದಷ್ಟು ಸಿಮೆಂಟಿನ ಸರಬರಾಜನ್ನು ಜಲ ಮಂಡಳಿಗೆ ಒದಗಿಸಲು ಸರ್ಕಾರ ಪ್ರಯತ್ನ ಪಡುತ್ತಿದೆ ಮತ್ತು ಎಲ್ಲಾ ನೀರು ಸರಬರಾಜು ಯೋಜನೆಗಳ ತುರ್ತು ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಅದರಿಂದ ಸಹಾಯವಾಗುತ್ತದೆಂದು ನಾನು ನಂಬಿದ್ದೇನೆ.

ಈ ಮೇಲೆ ತಿಳಿಸಿರುವಂತೆ ಈ ತುರ್ತುಕಾರ್ಯಕ್ರಮಗಳಿಗೆ ಸುಮಾರು ೪–೧೦ ಕೋಟಿ ರೂಪಾಯಿಗಳು ಬೇಕಾಗಿದೆ. ಪಟ್ಟಣಗಳ ನೀರು ಸರಬರಾಜು ವ್ಯವಸ್ಥೆ ಈ ಪಟ್ಟಣಗಳ ಮುನಿಸಿಪಲ್ ಕೌನ್ಸಿಲ್‌ಗಳ ಜವಾಬ್ದಾರಿಯಾಗಿದೆ. ಆದಾಗ್ಯೂ ಸರ್ಕಾರ ಈ ವರ್ಷದ ಕ್ಷಾಮ ಪರಿಸ್ಥಿತಿಯಿಂದಾಗಿ ಈ ಮುನಿಸಿಪಲ್ ಕೌನ್ಸಿಲ್‌ಗಳ ಸಹಾಯಕ್ಕೆ ಬಂದು ಹಣ ಸಹಾಯ ಮಾಡುತ್ತಿದೆ.

ಈಗಾಗಲೇ ೫೦ ಲಕ್ಷ ರೂಪಾಯಿಗಳನ್ನು ಜಲಮಂಡಳಿಗೆ ಒದಗಿಸಲು ಆದೇಶ ನೀಡಲಾಗಿದೆ. ಈ ಹಣವನ್ನು ಜಿಲ್ಲಾಧಿಕಾರಿಗಳು ಜಲಮಂಡಳಿಗಳ ಅಧಿಕಾರಿಗಳಿಗೆ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಬಿಡುಗಡೆ ಮಾಡುತ್ತಾರೆ. ಕೆಲಸಗಳು ಮುಂದುವರಿದಂತೆ ಸರ್ಕಾರವು ಹೆಚ್ಚು ಹೆಚ್ಚು ಹಣವನ್ನು ನೀಡುತ್ತದೆ. ಹಣಕಾಸಿನ ಒತ್ತಡದಿಂದಾಗಿ ಸರ್ಕಾರವು ಮೇಲೆ ಕಾಣಿಸಿದ ಎಲ್ಲ ಹಣವನ್ನು ನೀಡಲು ಸಾಧ್ಯವಾಗದೇ ಇರಬಹುದು. ಅಂತಹ ಸಂದರ್ಭಗಳಲ್ಲಿ ಮುನಿಸಿಪಲ್ ಕೌನ್ಸಿಲ್‌ಗಳು ತಮ್ಮ ಸಂಪನ್ಮೂಲಗಳನ್ನು ಈ ದಿಸೆಯಲ್ಲಿ ಸಾಧ್ಯವಾದಷ್ಟು ಉಪಯೋಗಿಸುತ್ತಾರೆಂದು ನಾನು ನಂಬಿದ್ದೇನೆ.

ನಮ್ಮ ಅಡಚಣೆಗಳ ಪಟ್ಟಿಯನ್ನು ತಮ್ಮ ಮುಂದಿಡುವುದು ಸರ್ಕಾರದ ಉದ್ದೇಶವಲ್ಲ, ಪರಿಸ್ಥಿತಿಯ ಗಾಂಭೀರ್ಯ, ಗಾತ್ರ ಮತ್ತು ವಾಸ್ತವಿಕತೆಯ ಪರಿಮಿತಿಗಳನ್ನು ತಮ್ಮ ಗಮನಕ್ಕೆ ತಂದರೆ. ಸರ್ಕಾರದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಸಹಾಯವಾಗಲೆಂಬ ಉದ್ದೇಶದಿಂದ ಮಾತ್ರ ತಿಳಿಸಿದ್ದೇನೆ.

ಸರ್ಕಾರ ಎಲ್ಲ ಅಗತ್ಯ ಕ್ರಮಗಳನ್ನು ತೆಗೆದುಕೊಂಡು ಪರಿಸ್ಥಿತಿಯನ್ನು ಎದುರಿಸುತ್ತದೆ. ಯಾವ ಅಗತ್ಯ ಕ್ರಮವನ್ನೂ ಮಾಡದೆ ಬಿಡುವುದಿಲ್ಲ. ಪ್ರಾಮಾಣಿಕವಾಗಿ ಪ್ರಯತ್ನಿಸಿ, ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

7-30 P. M.

MR. SPEAKER.—Before I go to the next item, I wish to announce that I have received a letter from the Hon'ble Minister for Planning and that is placed on the table of the House.*

STATEMENT

re : (ii) Scarcity of drinking water in Rural Areas.

SRI BEGANE RAMAIAH (Minister for Rural Development and Panchayatraj).—Sir, I wish to make the following statement.

---

* Copy placed in the Karnataka Legislature Library *Vide* No. 28 Dated 31-3-1981.

Due to failure of monsoon in August 1980 in many parts of the State, 15 districts have been affected either, wholly, partly or marginally with severe drought conditions this year.

Wholly affected :	Gulbarga, Bijapur and Kolar districts.
Partly affected :	Raichur, Bellary, Bidar, Dharwar, Chitradurga, Tumkur, Belgaum and Bangalore districts.
Marginally affected :	Mysore, Mandya, Hassan and Chickmagalur districts.

In all 102 Taluks in 15 districts have been affected. No. of works which are productive in nature and create durable community assets have been taken up in scarcity affected areas by P.W.D., Agriculture Forest and Development Departments through the Taluk Development Boards. The problem of scarcity of drinking water is being tackled expediously by this department delegating powers to the Chief Engineers of PHEand Deputy Commissioners concerned which is as follows.—

1. In August 1980 itself, the Deputy Commissioners of districts have been requested to keep ready shelf of projects to take up relief works wherever necessary.

2. Government have appointed a Special Secretary of the rank of the Divisional Commissioner in Revenue Department to look after exclusively scarcity relief matters.

3. Government have reconstituted the district level committee for drought reliefs. M.L.As/M.L.Cs/M.Ps of the districts are also members of the committees.

4. The Deputy Commissioners of the scarcity affected districts have been requested to reconstitute taluk level committees for drought relief works. All the MLAs/MLCs/MPs of the taluks are the members of the committees.

Note : Committee shall throughly discuss the prevailing scarcity conditions and draw programme of relief operation including supply of drinking water and fodder *etc.*

5. The Government have appointed District relief Officers to assist the Deputy Commissioners in the effective implementation of the relief works.

6. The Deputy Commissioners of the concerned districts are authorised to requisition the vehicles of other departments in their district other than Health and Poice Departments where such vehicles are urgently required for implementation and supervision of relief works.

7. The Director of Mines and Geology has been authorised to purchase 5 Geology Kits and also authorised to appoint Geologist on daily wages.

8. Sanction has also been accorded to purchase 2 well revitalisation units for deepending the existing wells in the scarcity affected areas.

9. The Chief Engineers of PHE have been authorised to purchase 45,000 metres of G. I. Pipes and 207 pumpsets.

10. The Deputy Commissioners have been delegated powers with selection of sites with regard to sinking of Borewells in identified villages (apart from approved programme of water supply programme for the current Year). The jurisdictional Executive Engineers are sinking borewells in those villages.

11. With regard to the movement of rigs, the Deputy Commissioners have been authorised to draw regular rig movement programme within the district so as to minimise unnecessary criss-cross movement of the rigs. The Chief Engineers of PHE are authorised to engage private rigs and also for sinking of borewells.

FUNDS :—

The Government have released a sum of Rs. 100.00 lakhs to the Chief Engineers to sink borewells in villages affected by scarcity of drinking water.

1)	Chief Engineer (North)	Rs. 75.00	lakhs.
2)	Chief Engineer (South)	Rs. 25.00	lakhs.

The progress achieved with regard to drinking water facilities in the scarcity areas as on 21-3-1981 is annexed to this note (*Vide* Annexure-I).

Further, wherever there is necessity for Drinking water to be transported to the villages should be arranged by the Deputy Commissioners and the jurisdictional Executive Engineers of PHE through Trucks and Carts. For storing of water, the arrangements are also being made to instal R.C.C. 2 to 3 taps.

There are at present 99 rigs including Government as well as Private rigs working in the district as detailed:

The position of the rigs functioning in the State as on 7-3-1981.

1	Bangalore	6
2	Kolar	6
3	Mysore	6
4	Mandya	2
5	Hassan	4
6	Chickmaglur	4
7	Chitradurga	3
8	Tumkur	2
9	Kodagu	1
10	Dakshina Kannada	2
11	Shimoga	4
12	Dharwar	4
13	Belgaum	7
14	Bijapur	11
15	Raichur	7
16	Bellary	6
17	Gulbarga	12
18	Bidar	6
19	Uttara Kannada	6
	Total	99

Normal Water supply programme for the current year.—

The Government have approved the following programmes for 1980-81.

1. (a) Borewells—5,803 — Allotment Rs. 490.00 lakhs
   (b) Tribal Sub-Plan — Rs. 20.00 lakhs
   N. R. W. S — 176
   Augmentation Scheme. 13 — Allotment Rs. 280 lakhs

Borewells.—

4,630 Borewells have been sunk, of which 3,625 are successful and 2,113 pumpsets have been fitted to the successful borewells. The expenditure incurred is Rs. 456.18 lakhs.

Under Tribal Sub-Plan, 44 borewells have been sunk, out of which, 34 are successful. 10 Hand pumps have been fitted. The expenditure is Rs. 2.43 lakhs.

N.R.W.S.—

In 80 villages, 79 schemes have been completed. The expenditure is Rs. 204.78 lakhs.

A.R.W.S.—Borewells (Central).—

In 342 villages, 836 borewells have been sunk. Out of which, 590 are successful and 505 hand pumps have been fitted. The expenditured incurred is Rs. 33.00 lakhs.

Piped Water Supply Schemes : (Central)

In 46 villages, 43 piped water supply schemes have been completed. The expenditure incurred is Rs. 99.78 lakhs.

PROGRESS ACHIEVED UNDER SCARCITY RELIEF WORKS IN KARNATAKA AS ON 21-3-1981.

Sl. No.	District	No. of Taluks affected	No. of Bore Wells Drilled	No. of Bore Wells Successful	No. of villages covered	No. of Hand pumps fixed.	No. of Hand pumps repaired	No. of rings, working	Expenditure incurred
1	2	3	4	5	6	7	8	9	10
									Rs. in lakhs
1	Bangalore	4	66	55	55	42	224	3	4.95
2	Kolar	11	60	51	51	133	285	9	4.59
3	Mysore	10	—	—	—	—	—	1	—
4	Mandya	7	—	—	—	—	—	—	—
5	Hassan	5	—	—	—	—	—	2	—
6	Chikkamagalur	2	—	—	—	—	—	1	—
7	Chitradurga	6	66	66	66	2	—	3	6.60
8	Tumkur	8	21	21	21	—	—	2	2.10
9	Dharward	4	9	9	9	—	—	1	1.35
10	Belgaum	5	4	4	4	—	—	5	0.60
11	Bijapur	11	65	65	65	—	—	11	9.75
12	Raichur	9	60	60	60	18	116	10	9.00
13	Bellary	6	—	—	—	—	24	5	—
14	Gulbarga	9	75	67	67	1	141	12	10.05
15	Bijapur	5	43	27	27	6	57	10	4.05
	Total	102	469	425	425	202	847	75	53.04

† ಶ್ರೀ ಎಸ್. ಆರ್. ಬೊಮ್ಮಾಯಿ. —ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರಿಗ್‌ಗಳನ್ನು ತಂದು ಕೊಳವೆ ಬಾವಿ ತೋಡಿ ಕುಡಿಯುವ ನೀರನ್ನು ಒದಗಿಸಲು ಪ್ರಯತ್ನ ಮಾಡಿರುವುದನ್ನು ಸ್ವಾಗತ ಮಾಡುತ್ತೇನೆ. ಜಾರಿಗೆ ಕೊಡುವಾಗ ಆನೇಕ ತೊಂದರೆಗಳು ಬರುತ್ತವೆ. ಜಿಯಾಲಿಜಿಸ್ಟ್‌ಗಳ ಸಂಖ್ಯೆ ಬಹಳ ಕಡಿಮೆ ಇರುವ ಹಾಗೆ ಕಾಣುತ್ತದೆ. ಅವರು ಪಾಯಿಂಟ್ ತೋರುವ ಕಡೆ ನೀರೇ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಜಿಯಾಲಿಜಿಸ್ಟ್‌ಗಳ ಸಂಖ್ಯೆ ಎಷ್ಟು ? ರಿಗ್‌ಗಳನ್ನು ತಂದು ಸುಮ್ಮನೆ ಇಟ್ಟು ಕೊಳ್ಳುವ ಪರಿಸ್ಥಿತಿ ಇದೆ. ನಾನು ಈ ವಿಷಯದಲ್ಲಿ ಜಿಲ್ಲಾಧಿಕಾರಿಗಳನ್ನು ಕೇಂದ್ರಾಗ ಅವರು ಜಿಯಾಲಿಜಿಸ್ಟ್‌ಗಳ ಸಂಖ್ಯೆ ಕಡಿಮೆ ಇದೆಯೆಂದು ಒಪ್ಪಿಕೊಂಡಿದ್ದಾರೆ. ರಿಗ್‌ಗಳನ್ನು ತಂದು ಪ್ರಯೋಜನವಿಲ್ಲದಂತಾಗುತ್ತದೆ. ಈ ತೊಂದರೆಯನ್ನು ಯಾವ ರೀತಿಯಲ್ಲಿ ನಿವಾರಿಸುತ್ತೀರಿ ?

ಶ್ರೀ ಶೇರ್‌ಖಾನ್.—ಅಧ್ಯಕ್ಷರೆ, ನಮ್ಮ ಗುಲ್ಬರ್ಗದ ಎಷ್ಟೋ ಜಾಗದಲ್ಲಿ ಪಾಯಿಂಟ್ ಫೈಲ್ ಆಗುತ್ತವೆ. ಆದುದರಿಂದ, ನೀರು ಕಂಡುಬರುವುದಕ್ಕೆ ಇನ್ನು ಬೇರೆ ಪದ್ಧತಿ ಉಪಯೋಗ ಮಾಡುತ್ತೀರಾ? ಇವತ್ತು ನಾವು ತಮಿಳುನಾಡಿನಿಂದ ರಿಗ್ ತೆಗೆದುಕೊಂಡಿದ್ದೇವೆ. ಅಲ್ಲಿ ರಿಜಿಸ್ಟರ್ ಆಗಿದ್ದು, ಅವು ವಾಪಸ್ಸು ಬರಬೇಕೆಂದು ಆರ್ಡರ್ ಮಾಡಿದ್ದಾರೆ. ನಾವು ಜಾಸ್ತಿ ತಮಿಳುನಾಡಿನಿಂದ ಎಂಗೇಜ್ ಮಾಡಿದ್ದೇವೆ. ನಮ್ಮಲ್ಲಿ ಇಷ್ಟು ತ್ರಾಸ್ ಇದ್ದಾಗಲೂ ಸಹ ಅವರು ವಾಪಸ್ಸು ತರಿಸಿ ಕೊಳ್ಳುತ್ತಿದ್ದಾರೆ ಎಂದರೆ ನಮ್ಮ ಸರ್ಕಾರದವರೆಂ ಏನು ಮಾಡುತ್ತಿದ್ದೀರಿ. ಅವನ್ನು ಇಟ್ಟು ಕೊಳ್ಳುತ್ತೀರೋ ಅಥವಾ ವಾಪಸ್ಸು ಮಾಡುತ್ತೀರೋ ?

SRI PRABHAKAR TELKAR.—I have sent in Call attention notices about the scarcity of drinking water in 10-12 villages of Chittapur taluk and 20 villages of Sedam taluk, wherein I have given specific names of the villages which are affected. I have heard the statements read out by the Minister just now. In this connection, I wish to inform the House that in our areas though there are borewells they are not functioning properly. It is the same in the case of handpumps also. Large number of complaints have been received from other taluks that handpumps and borewells are not maintained properly, Now, it is time that steps should be taken immediately to repair the borewells and handpumps which have gone out of order and provide drinking water in the scarcity areas. Secondly I sugges to the Government to allow the people to dug pen wells wherever they are feasible so that the people in those areas can get drinking water through the open wells till other alternate arrangements are made by the Government. Thirdly, I suggest to the Goverament to dug wells near the river beds and it will cost about Rs. 1000/- to dug the wells. It will definitely help the people in getting water. Lastly, in places like Harijan wadas and Lambani and as there are no proper drinking water facilities. I request the Government to take steps in this direction to provide drinking water in those areas.

ಶ್ರೀ ಎಂ. ವೈ. ಪಾಟೀಲ್.—ಅಧ್ಯಕ್ಷರೆ, ನಮ್ಮ ಗುಲ್ಬರ್ಗ ಆಳಂದ್ ತಾಲೂಕಿನಲ್ಲಿ ನೀರಿಗೆ ಬಹಳ ತೊಂದರೆ ಇದೆ. ಆ ಬಗ್ಗೆ ಸಾಕಷ್ಟು ರಿಪೋರ್ಟ್‌ಗಳನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆಳಂದ ತಾಲೂಕು ಲಂಬಾಣಿ ತಾಂಡವಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಖಿಜೂರ್, ತಡಕಲ್, ತೆಲ್ಲೂರು ಮುಂತಾದ ಗ್ರಾಮಗಳಲ್ಲಿ ಅನೇಕ ತಿಂಗಳಿಂದ ನೀರನ್ನು ದೂರದಿಂದ ಹೊತ್ತುಕೊಂಡು ಬರಬೇಕಾಗಿದೆ. ಕುಡಿಯುವ ನೀರಿನ ಸೌಕರ್ಯ ಒದಗಿಸುವ ಬಗ್ಗೆ ಸರ್ಕಾರ ತಿನ್ನು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ನಮ್ಮ ಮಾನ್ಯ ಮಂತ್ರಿಗಳಾದ ಧರಮ್ ಸಿಂಗ್ ಅವರು ಆಳಂದ್ ತಾಲೂಕಿನಲ್ಲಿ ನೀರಿನ ತೊಂದರೆ ಇದೆ ಎಂದು ಹೇಳಲಿಲ್ಲ. ಯಾಕಂದರೆ, ತಪ್ಪು

ಪುರ್, ಗುರುಮಿಟ್ಕಲ್ ಹೇಳಿದ್ದಾರೆ. ಆದು ಪಕ್ಕದ ತಾಲ್ಲೂಕು ಇದೆ. ಮುನಿಸಿಪಲ್ ಏರಿಯಾದಲ್ಲಿ ಸಹ ನೀರಿನ ಸೌಕರ್ಯ ಒದಗಿಸಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಅಧ್ಯಕ್ಷರೆ, ಕುಡಿಯುವ ನೀರಿನ ತೊಂದರೆ ಇರತಕ್ಕ ಪಳ್ಳಿಗಳಿಗೆ ಬೋರ್ ಹಾಕಿ ಹ್ಯಾಂಡ್ ಪಂಪ್ ಫಿಕ್ಸ್ ಮಾಡಿದ್ದಾರೆ. ಅವುಗಳನ್ನು ರಿಪೇರಿ ಮಾಡಿದ ೧೫-೨೦ ದಿವಸದಲ್ಲಿಯೇ ಮತ್ತೆ ಕೆಟ್ಟುಹೋಗುತ್ತವೆ. ಅಧ್ಯಕ್ಷರೆ, ಪಂಜಾಬ್ ಮತ್ತು ಹರಿಯಾಣದಲ್ಲಿ ರೌಂಡ್ ವೀಲ್ ಇರತಕ್ಕ ಹ್ಯಾಂಡ್ ಪಂಪ್ ಫಿಕ್ಸ್ ಮಾಡಿದ್ದಾರೆ. ಅವುಗಳು ೧೦-೧೫ ವರ್ಷ ಆದರೂ ಕೆಡದೇ ಚೆನ್ನಾಗಿ ನಡೆಯುತ್ತವೆ. ಹಿಂದರೆ ಅವು ಸ್ವಲ್ಪ ಕಾಸ್ಟ್‌ಲಿ ಆಗುತ್ತವೆ. ಮೂರನೇ ಒಂದು ಭಾಗ ಅಥವಾ ಅರ್ಧ ಭಾಗ ರೇಟು ಜಾಸ್ತಿಯಾಗುತ್ತದೆಂದು ಕೇಳಿದ್ದೇನೆ. ಸುಮ್ಮನೆ ಇವರು ೩೦೦-೪೦೦ ರೂಪಾಯಿ ಕೊಡಿಸಿ ಸಿಕ್ಕುತ್ತದೆಂದು ಕೊಟ್ಟಾಂತರ ರೂಪಾಯಿ ಬೋರ್‌ವೆಲ್ ಹಾಕಿಸಿ, ಜೀಪ್‌ರೇಟಿನಲ್ಲಿ ತಂದು ಹಾಕಿ ಜನರಿಗೆ ಆಗಬಾರದ ತೊಂದರೆಯಾಗಿದೆ. ಸರ್ಕಾರದವರು ರೌಂಡ್‌ವೀಲ್ ಇರತಕ್ಕದ್ದನ್ನು ಹಾಕಿಸಲಿಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಹಾಸನ ಜಿಲ್ಲೆ ವಿಪರೀತ ಬರಗಾಲ ಪ್ರದೇಶ, ಇದುವರೆಗೂ ಸುಮಾರು ೬-೭ ರಿಗ್‌ಗಳು ಕೆಲಸ ಮಾಡುತ್ತಿದ್ದವು. ಇವೊತ್ತು ಹಾಸನದ ಹತ್ತಿರ ಪಳ್ಳಿಗಳಲ್ಲಿ ಕುಡಿಯುವ ನೀರಿನ ತೊಂದರೆ ಜಾಸ್ತಿಯಾಗಿದೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳನ್ನು ಕಂಡು ಮಾತನಾಡಿದಾಗ, ಶ್ರವಣಬೆಳಗೊಳದ ಗೊಮ್ಮಟೇಶ್ವರ ಮಹಾಮಸ್ತಕಾಭಿಷೇಕಕ್ಕೆ, ಅಲ್ಲಿಗೆ ರಿಗ್‌ಗಳನ್ನು ಕಳುಹಿಸಿಕೊಟ್ಟಿದ್ದೇವೆ. ಅವು ವಾಪಸ್ಸು ಬರುತ್ತವೆ. ಬಂದ ತಕ್ಷಣ ಕಳುಹಿಸುತ್ತೇವೆಂದು ಹೇಳಿದ್ದರು. ಇವೊತ್ತು ಹಾಸನ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳವರಿಂದ ರಿಪೋರ್ಟ್ ತರಿಸಿಕೊಂಡು ಮಾಡಲಿ. ಮಾನ್ಯ ಸಚಿವರು ನಮ್ಮ ಹಾಸನ ಜಿಲ್ಲೆಗೆ ತಕ್ಷಣ ಎರಡು ರಿಗ್ ಕಳುಹಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಅಧ್ಯಕ್ಷರೆ, ಮಂಡ್ಯ ನಗರಕ್ಕೆ ಕಾವೇರಿ ನೀರಿನ ಕುಡಿಯುವ ನೀರಿನ ಯೋಜನೆ ಸಾಕಷ್ಟು ಬಿಹಳ ಮಂದಗತಿಯಲ್ಲಿ ನಡೆಯುತ್ತಿದೆ, ಅದರ ಬಗ್ಗೆ ನಾನು ಒಂದು ಗಮನಸೆಳೆಯುವ ಸೂಚನೆಯನ್ನು ತಳುಹಿಸಿದ್ದೆ. ನಗರಸಭೆಯಿಂದ ೧೯೮೦ನೇ ಇಸವಿಯಲ್ಲಾದರೂ ಈ ಕೆಲಸವನ್ನು ಪೂರ್ಣಮಾಡಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪುಟ್ಟಾಪತಿ —ಅಧ್ಯಕ್ಷರೆ, ಈಗ ನಮ್ಮ ದಾವಣಗೆರೆಗೆ ತುಂಗಭದ್ರ ಮತ್ತು ಭದ್ರ ಜಲಾಶಯದ ಚಾನಲ್‌ನಿಂದ ನೀರನ್ನು ಪಡೆಯಬೇಕು. ನಮಗೆ ತುಂಗಭದ್ರದಿಂದ ೧೫ ಲಕ್ಷ ಗ್ಯಾಲನ್ ನೀರು ಬರುತ್ತದೆ. ಭದ್ರ ಜಲಾಶಯದ ಕಾಲುವೆಯಿಂದ ೩೫ ಲಕ್ಷ ಗ್ಯಾಲನ್ ನೀರು ಬರುತ್ತದೆ. ಈಗ ಭದ್ರ ಜಲಾಶಯ ರಿಪೇರಿ ಮಾಡಲಿಕ್ಕೆ ಬಂದ್ ಮಾಡುವ ಬಗ್ಗೆ ಪರಿಶೀಲನೆ ಮಾಡಿ ತಿಳಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅಧ್ಯಕ್ಷರೆ, ಅದು ಚೆನ್ನಾಗಿದ್ದು ನೀರು ಬಿಲ್ಲಿಸದೆ ಇದ್ದರೆ ಬಹಳ ಸಂತೋಷ. ಆಕಸ್ಮಾತ್ ನಿಲ್ಲಿಸತಕ್ಕದ್ದು ಏನಾದರೂ ಬಂದರೆ ಸುಮಾರು ೨ ಲಕ್ಷ ಜನ ದಾವಣಗೆರೆ ಇರತಕ್ಕ ನಮಗೆ ಸುಮಾರು ೩೫ ಲಕ್ಷ ಗ್ಯಾಲನ್ ನೀರನ್ನು ಪ್ರತಿದಿವಸ ಉಪಯೋಗಿಸುತ್ತಿದ್ದಂತವರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಈಗಲೆ ವಿನಂತಿಸಿಕೊಳ್ಳುತ್ತೇನೆ. ಅಲ್ಲಿ ಏನಾದರೂ ನೀರು ನಿಲ್ಲಿಸುವ ಸೂಚನೆ ಕಂಡುಬಂದರೆ, ಕೂಡಲೇ ಅಲ್ಲಿಗೆ ರಿಗ್‌ಗಳನ್ನು ಕಳುಹಿಸಿ ಬೋರ್ ಹಾಕಿಸುವುದಾಗಲಿ, ಇರತಕ್ಕ ಬಾವಿಗಳನ್ನು ಸ್ವಚ್ಛಗೊಳಿಸುವುದು ಆಗಲಿ, ನೀರನ್ನು ಒದಗಿಸಲು ಬೇರೆ ವ್ಯವಸ್ಥೆ ಮಾಡುವುದಕ್ಕೆ, ಸರ್ಕಾರ ಕೂಡಲೇ ಅಧಿಕಾರಿಗಳಿಗೆ ಆದೇಶ ಕೊಟ್ಟು ಆದಷ್ಟು ಬೇಕಾಗುವಷ್ಟು ಹಣ ಒದಗಿಸುವುದಕ್ಕೆ ಮಾನ್ಯ ಸಚಿವರು ಮುಂದಾಗಬೇಕು. ನಾನು ಇದನ್ನು ಪತಕ್ಕೆ ಹೇಳುತ್ತಿದ್ದೇನೆ ಎಂದರೆ ನೀರು ನಿಲ್ಲಿಸಿದ ಮೇಲೆ ನಾವು ಹೋಗಿ ಕೆಲಸ ಮಾಡುತ್ತೇವೆ ಎಂದರೆ ಆಗುವುದಿಲ್ಲ. ಇತ್ತೀಚೆಗೆ ನಗರ ಬಹಳ ಬೆಳವಣಿಗೆಯಾಗಿದೆ. ಈಗಲೇ ಅಲ್ಲಿ ನೀರಿನ ತೊಂದರೆ ಇದೆ. ಇದು ಏನಾದರೂ ನಿಂತು ಹೋದರೆ ಇನ್ನಷ್ಟು ಹೆಚ್ಚಿನ ತೊಂದರೆಯಾಗುತ್ತದೆ. ನೀರಿನ ತೊಂದರೆ ಆದಮೇಲೆ ಮಾನ್ಯ ಮಂತ್ರಿಗಳು ಗಮನ ಕೊಡುವ ಬದಲು ಈಗಲೇ ಅದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಿ ಮಾಸಿಯಪ್ಪ.—ಅಧ್ಯಕ್ಷರೆ. ಚಿತ್ರದುರ್ಗ ನನ್ನ ಕ್ಷೇತ್ರ. ಅಲ್ಲಿ ದೊಡ್ಡಸಿದ್ದವನಹಳ್ಳಿ ಎಂಬಲ್ಲಿ ಸುಮಾರು ನಾಲ್ಕೈದು ಸಾವಿರ ಪ್ರಜೆಗಳಿಗೆ ಇವೆ. ಆ ಊರಿನ ಮಧ್ಯದಲ್ಲಿ ಒಂದು ದೊಡ್ಡ ಹೊಂಡ ಇದೆ. ಅದರಿಂದ ಜನರೆಲ್ಲಾ ನೀರನ್ನು ತರಬೇಕಾಗಿದೆ. ೪೦ ಅಡಿ ಕೆಳಗೆ ಇಳಿದು ನೀರನ್ನು ತುಂಬಿಕೊಂಡು ಬರಬೇಕಾಗಿದೆ. ಅಲ್ಲಿ ನೀರನ್ನು ಸೇದಲಿಕ್ಕೆ ಬರುವುದಿಲ್ಲ. ಈಗ ಎನ್.ಆರ್.ಡಬ್ಲ್ಯೂಎಸ್ ಸ್ಕೀಮ್‌ನಲ್ಲಿ ಸ್ಯಾಂಕ್ಷನ್ ಆಗಿದೆ. ಕೆಲವು ಸರ್ವೀಸ್‌ನಲ್ಲಿದ್ದು, ಪೈಪು ಕೆಟ್ಟು ರೀಪ್ಲೇಸ್ ಮಾಡುತ್ತಿದ್ದಾರೆ. ಈಗ ಮಾಡುತ್ತಾ ಇರತಕ್ಕ ವ್ಯವಸ್ಥೆಯಿಂದ ಸುಮಾರು ಅರ್ಧ ಗ್ರಾಮಕ್ಕೆ ಮಾತ್ರ ನೀರಾಗುತ್ತದೆ. ಮುಖ್ಯವಾಗಿ ಹರಿಜನರು, ಕುರುಬರು, ನಾಯಕರು ವಾಸ ಮಾಡತಕ್ಕ ಪ್ರದೇಶ ಇದೆ. ಆ ಗ್ರಾಮ ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಮ್‌ನಿಂದ ಕುಡಿಯುವ ನೀರನ್ನು ಒದಗಿಸತಕ್ಕ ವ್ಯವಸ್ಥೆ ನಡೆಯುತ್ತಿಲ್ಲ. ಅದರ ಬಗ್ಗೆ ಮಾನ್ಯ ಸಚಿವರಿಗೂ ಕೂಡ ಅರ್ಜಿ ಕೊಟ್ಟಿದ್ದೇನೆ. ಅದರ ಮೇಲೆ ಬರೆದು ಕಳುಹಿಸಿಕೊಟ್ಟಿದ್ದಾರೆ. ಅದು ಇವೊತ್ತಿನವರೆಗೆ ಒಂದು ವರ್ಷದ ಮೇಲಾಗಿದೆ. ಇಲ್ಲಿಯವರೆಗೂ ಕೂಡ ಆ ಊರಿಗೆ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಆಗಿಲ್ಲ. ಆದ್ದು ಬಹಳ ದೊಡ್ಡ ಗ್ರಾಮ. ನೀರಿನ ತೊಂದರೆ ಬಹಳ ಇದೆ. ಹಿಂದುಳಿದ ಜನರಿಗೆ ಬಹಳ ತೊಂದರೆ ಇದೆ. ಹಾಗೆ ರಸ್ತೆ ಮಗ್ಗಲು ನಕ್ಕಲಿವುರದವರು ಬಹಳ ಕಾಲದಿಂದಲೂ ರೆಪ್ರೆಸೆಂಟೇಷನ್ ಕೊಟ್ಟುಕೊಂಡು ಬಂದಿದ್ದಾರೆ. ಇವೊತ್ತಿನ ದಿವಸ ಅಲ್ಲಿ ನೀರಿನ ಪರಿಸ್ಥಿತಿ ಬಹಳ ಕಷ್ಟಕ್ಕೆ ಬಂದಿದೆ. ಆದುದರಿಂದ, ಈ ಎನ್.ಆರ್.ಡಬ್ಲ್ಯೂ.ಎಸ್. ಸ್ಕೀಮಿನಲ್ಲಾಗಲಿ ಅಥವಾ ಒಂದು ಮಿನಿ ಸ್ಕೀಮ್‌ನಲ್ಲಿಯಾದರೂ ಸ್ಯಾಂಕ್ಷನ್ ಮಾಡಿ ನೀರಿನ ಅನುಕೂಲ ಒದಗಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಚೌಡಯ್ಯ (ಕೊರಗೋಡು).—ಗನ್ಮಾನ್ಯ ಸಭಾಧ್ಯಕ್ಷರೆ, ನಾನು ಕೇವಲ ಎರಡೇ ಎರಡು ಕ್ಲಾರಿಫಿಕೇಷನ್‌ಗಳನ್ನು ಮಾತ್ರ ಕೇಳಬಯಸುತ್ತೇನೆ. ಚೀಫ್ ಇಂಜಿನಿಯರ್ ಸೌತ್‌ಗೆ ೨೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ರಿಲೀಸ್ ಮಾಡಿದ್ದೇವೆಂದು ಹೇಳಿದ್ದಾರೆ. ಅದನ್ನು ಡಿಸ್ಟ್ರಿಕ್ಟ್ ವೈಸ್ ಬ್ರೇಕಪ್ ಆಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. In the statement, you have said,

> "Position of the rigs functioning in the State as in 7-3-1981."

ಇದನ್ನು ೨೬.೨೮.೮೨ಕ್ಕೆ ಕೊಟ್ಟಿದ್ದರೆ ಏನು ನಿಮಗೆ ಕಷ್ಟವಾಗಿತ್ತು? ನಮ್ಮ ಜಿಲ್ಲೆ ಮಟ್ಟಿಗೆ ನಾನು ಹೇಳುವುದಾದರೆ, ಮಂಡ್ಯದಿಂದ ನಾನು ನಿನ್ನೆಯ ದಿವಸ ಬಂದೆ. ಅಲ್ಲಿ ಒಂದು ರಿಗ್ ಕೂಡ ಇಲ್ಲ. ಶುಕ್ರವಾರ ಒಂದು ರಿಗ್ ಆದಿಚುಂಚನಗಿರಿಯಲ್ಲಿ ಇತ್ತು, ಅದು ತಮಿಳ್ನಾಡಿಗೆ ಸೇರಿದ್ದಂತೆ. ಅದನ್ನೂ ಕೂಡ ವಾಪಸು ತರಿಸಿಕೊಂಡಿದ್ದಾರೆ. ಇಂಥ ಇನ್‌ಫರ್ಮೇಷನನ್ನು ಏತಕ್ಕೆ ಕೊಡುತ್ತೀರಿ ? ಇದು ಸರಿಯಲ್ಲ. ತಾವು ಲೇಟೆಸ್ಟ್ ಇನ್‌ಫರ್ಮೇಷನ್ ಏನು ಎಂಬುದನ್ನು ದಯವಿಟ್ಟು ತರಿಸಿ ಹೇಳಬೇಕು.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕ ವರದಿಯ ಪ್ರಕಾರ ಈ ಯೋಜನೆ ಸರಿಯಾಗಿ ಕೆಲಸ ಮಾಡುತ್ತಿದೆ ಎಂದು ತಿಳಿದು ಬರುತ್ತದೆ ಇವುಗಳು ಚೆನ್ನಾಗಿ ಕೆಲಸ ಮಾಡುವುದಕ್ಕೋಸ್ಕರ ಬಿ.ಡಿ.ಓ. ಮುಖಾಂತರ ಸಂಬಂಧಪಟ್ಟ ಇಂಜಿನಿಯರಿಂಗ್ ಇಲಾಖೆಯು ಖಚಿತವಾಗಿ ಕೆಲಸ ಮಾಡುವ ವ್ಯವಸ್ಥೆ ಇತ್ತು. ತಾಲೂಕು ಮಟ್ಟದಲ್ಲಿ ಕೆಲಸ ಮಾಡತಕ್ಕ ಅಧಿಕಾರಿ ಸುಖವಾಗಿ ಬಿ.ಡಿ.ಓ. ಮುಖಾಂತರ ಕೆಲಸ ಮಾಡುತ್ತಿದ್ದರು. ಈಗ ಹೆಚ್ಚಿಕಡಿಮೆಯಾಗಿ ಆತನ ಸೇವೆಯನ್ನು ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್‌ನವರು ತೆಗೆದುಕೊಂಡಿದ್ದಾರೆ. ಈ ಇಲಾಖೆ ಮತ್ತು ಆ ಇಲಾಖೆ ಎರಡೂ ಇಲಾಖೆಗಳ ಕೆಲಸವನ್ನೂ ಬಿ.ಡಿ.ಓ.ರವರಿಗೆ ವಹಿಸಿ ಕೋ ಆರ್ಡಿನೇಷನ್ ಜಾಸ್ತಿ ಮಾಡಬೇಕು. ನಾವು ರಿಗ್ಸ್‌ನ್ನು ಒದಗಿಸಿದರೂ ಅವು ಹೆಚ್ಚಿನ ರೀತಿಯಲ್ಲಿ ಕೆಟ್ಟು ಹೋಗಿರುತ್ತವೆ, ಹ್ಯಾಂಡ್ ಪಂಪ್‌ಗಳನ್ನು ಬೋರ್‌ವೆಲ್‌ಗಳಿಗೆ ಕೊಟ್ಟಿರುವುದೂ ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಕೆಟ್ಟು ಹೋಗಿವೆ. ಅಪ್ ಟು ಡೇಟ್ ಇನ್‌ಫರ್ಮೇಷನ್ ಸರ್ಕಾರಕ್ಕೆ ಬೇಗನೆ ತಿಳಿಯುವಂತೆ ಬಿ.ಡಿ.ಓ. ಮುಖಾಂತರ ಹೆಚ್ಚಿನ ವ್ಯವಸ್ಥೆ ಮಾಡಬೇಕು. ಹರಿಜನರಿಗೋಸ್ಕರ ಹೌಸಿಂಗ್ ಕಾಲೋನಿಗಳನ್ನು ಎಲ್ಲಿ ಕಟ್ಟಿಕೊಟ್ಟಿದ್ದೇವೆ ಅಲ್ಲಿ ನೀರಿನ ಅಭಾವ ಬಹಳವಾಗಿರುತ್ತದೆ. ಆದ್ದರಿಂದ ಅಂಥ ಭಾಗಗಳಿಗೆ ಹೆಚ್ಚಿನ ನಿಗಾವನ್ನು ಸರ್ಕಾರದವರು ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಕೆ. ಬಿ. ಪುಲ್ಲಪ್ಪ (ಪರಕಲಗೂಡು) — ಸ್ವಾಮಿ, ಈ ವಿಚಾರದಲ್ಲಿ ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೂಡ ಕಳುಹಿಸಿಕೊಟ್ಟಿದ್ದೇನೆ. ಆಗರೆ, ಅದು ಇದುವರೆಗೂ ಬರಲಿಲ್ಲ. ಮಾನ್ಯ ಮಂತ್ರಿಯವರು ಸ್ಟೇಟ್‌ಮೆಂಟ್ ಮಾಡುವಾಗ ಕೆಲವರು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದಾರೆಂದು ಹೇಳಿದರು. ನಮ್ಮ ಜಿಲ್ಲೆಯ ಕೊಣನೂರು ಮುನಿಸಿಪಾಲಿಟಿಯು ಸುಮಾರು ೧೦-೧೨ ಸಾವಿರ ಜನಸಂಖ್ಯೆಯಿಂದ ಕೂಡಿದ ಒಂದು ನಗರ ಈ ನಗರದಲ್ಲಿ ಸುಮಾರು ೨೫ ವರ್ಷಗಳ ಹಿಂದೆ ಒಂದು ಪೈಪ್‌ಲೈನ್‌ನನ್ನು ಹಾಕಿದ್ದರು. ಇದು ಬಹಳ ಹಳೆಯದು. ಇದು ಒಂದು ತಿಂಗಳಲ್ಲಿ ನಾಲ್ಕು ದಿವಸ ಕೆಲಸ ಹಾಡಿದರೆ ಇನ್ನೂಳಿದ ೨೬ ದಿವಸ ಕೆಲಸ ಮಾಡುವುದಿಲ್ಲ. ಇದರ ದುರಸ್ತಿಗಾಗಿ ತಗಲುವಂತಹ ಹಣದ ಬಗ್ಗೆ ಒಂದು ಎಸ್ಟಿಮೇಟನ್ನು ಮಾಡಿ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿತ್ತು. ಆದರೆ, ಅದು ಏನಾಯಿತೆಂಬುದನ್ನು ಅವರು ಹೇಳಲಿಲ್ಲ. ಇದು ನಮ್ಮ ಮಂತ್ರಿಗಳಿಗೂ ಗೊತ್ತಿದೆ. ನಮ್ಮ ತಾಲೂಕಿನಲ್ಲಿ ದಲ್ಲಿ, ರಿಣ್ಣೆಗಳು ಜಾಸ್ತಿ ಇರುವುದರಿಂದ ಮಳೆಗಾಲದಲ್ಲಿ ನೀರು ಜಾಸ್ತಿ ನಿಲ್ಲುತ್ತದೆ, ಮತ್ತು ಬೇಸಿಗೆಯಲ್ಲಿ ನೀರೇ ಇರುವುದಿಲ್ಲ. ಇದರಿಂದಾಗಿ ಕೆಲವಾರು ಹಳ್ಳಿಗಳಲ್ಲಿ ನೀರಿನ ಅಭಾವ ಜಾಸ್ತಿಯಾಗಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಪನುಮೇಗೌಡರೂ ಕೂಡ ಇದೇ ರೀತಿ ಹೇಳಿದರು. ಈಗ ನಮ್ಮ ಜಿಲ್ಲೆಗೆ ೪ ರಿಗ್‌ಗಳನ್ನು ಏನು ಕೊಟ್ಟಿದ್ದೀರಿ, ಇವು ಏನೇನೂ ಸಾಲುತ್ತಿಲ್ಲ. ಆದ್ದರಿಂದ ಇದನ್ನು ಇನ್ನೂ ಹೆಚ್ಚಿಗೆ ಕೊಡಬೇಕೆಂದು ಸರ್ಕಾರದವರನ್ನು ನಾನು ಒತ್ತಾಯಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಪ್ಪ (ತರೀಕೆರೆ).—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ೯೯ ರಿಗ್‌ಗಳನ್ನು ಒದಗಿಸಿದ್ದಾರೆ. ಅವರು ಒಂದು ತಿಂಗಳಿಗೆ ಸರಾಸರಿ ೧೭೦ ಬೋರ್‌ವೆಲ್‌ಗಳಂತೆ ತೆಗೆಸಿದರೂ ವರ್ಷಕ್ಕೆ ೧೭೦೦ ಬೋರ್‌ವೆಲ್‌ಗಳಾಗುತ್ತವೆ ಇವರು ಇದರಂತೆ ಲೆಕ್ಕ ಹಾಕಿ ಬೋರ್‌ವೆಲ್‌ಗಳನ್ನು ತೆಗೆಸುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಒಂದು ವರ್ಷಕ್ಕೆ ೧೭೦೦ರಂತೆ ಆದರೆ ೫ ವರ್ಷಕ್ಕೆ ಎಷ್ಟು ಬೋರ್‌ವೆಲ್‌ಗಳಾಗುತ್ತವೆಂಬುದನ್ನು ತಾವೇ ಲೆಕ್ಕ ಹಾಕಿ. ಇದರಂತೆ ನಿಮ್ಮ ಇಲಾಖೆಯವರು ಕೆಲಸ ಮಾಡದಿದ್ದರೆ ಅವರಿಗೆ ಸಂಬಳವನ್ನು ನಿಲ್ಲಿಸಬೇಕು. ತಾವು ಸಂಬಳ ನಿಲ್ಲಿಸಿದರೆ ತನ್ನಷ್ಟಕ್ಕೆ ತಾನೇ ಕೆಲಸಗಳಾಗುತ್ತವೆ.

ಶ್ರೀ ಬಿ ಎನ್. ಕೆಂಗೇಗೌಡ (ಚಾಮರಾಜ).—ಮಾನ್ಯ ಸಭಾಧ್ಯಕ್ಷರೆ, ನಮ್ಮ ಮೈಸೂರು ಜಿಲ್ಲೆಯಲ್ಲಿ number of taluks effected ten ..... ಎಂದು ರಿಪೋರ್ಟ್ ಮಾಡಿದ್ದಾರೆ

No. of borewells drilled	Nil
No of borewells successful	Nil
No. of borewells covered	Nil
No. of handpums fixed	Nil
No. of handpumps repaired	Nil
Expenditure incurred	Nil

ಎಂದು ಹೇಳಿದ್ದಾರೆ. ೧೦ ತಾಲೂಕುಗಳಲ್ಲಿ ಎಫೆಕ್ಟ್ ಆಗಿನೆಯೆಂದು ಸರ್ಕಾರದವರೇ ಒಪ್ಪಿಕೊಂಡಿದ್ದರೂ ಕೂಡ ಇವರಿಗೂ ಒಂದು ರೂಪಾಯಿಯನ್ನೂ ಕೂಡ ವಿಚ್ಚು ಮಾಡಿಲ್ಲ. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕು.

ಶ್ರೀ ಮತ್ತಿಕಟ್ಟೆ (ರೋಣ).—ಮಾನ್ಯ ಅಧ್ಯಕ್ಷರೆ, ಮಾನ್ಯ ಪಂಚಾಯತ್ ರಾಜ್ಯ ಹಾಗೂ ಗ್ರಾಮಾಭಿವೃದ್ಧಿ ಮಂತ್ರಿಗಳು ಕೊಟ್ಟಿರತಕ್ಕ ಆಂಕಿಅಂಶಗಳನ್ನು ನೋಡಿದರೆ ಬರಗಾಲ ಎಲ್ಲೆಲ್ಲಿ ಇದೆ ಆಲ್ಲೆಲ್ಲಾ ತೀವ್ರವಾಗಿ ಹಣವನ್ನು ವಿಚ್ಚು ಮಾಡಿ ನೀರನ್ನೊದಗಿಸುವ ದೃಷ್ಟಿಯಿಂದ ಬೋರ್‌ವೆಲ್‌ಗಳನ್ನು ಹಾಕುತ್ತಾರೆ. ಆದರೆ ಈ ರೀತಿ ಬೋರ್‌ವೆಲ್‌ಗಳನ್ನು ಹಾಕಿದಮೇಲೆ ಅದಕ್ಕೆ ಪಂಪ್‌ನ್ನು ಜೋಡಿಸದಿದ್ದರೆ ಇವರಿಂದ ಏನು ಉಪಯೋಗವಾಗಬೇಕಪ್ಪ. ಈ ವಿಷಯದಲ್ಲಿ ಸರ್ಕಾರದವರು ಚಿಂತನೆ ಮಾಡಬೇಕು. ನಾವು ಎಷ್ಟು ಹೇಳಿದರೂ ಸರ್ಕಾರದವರು ಇದರ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಂತೆ ಕಾಣುತ್ತಿಲ್ಲ. ಇಪರು

ಕೊಟ್ಟಿರುವ ಅಂಕಿಅಂಶಗಳನ್ನು ನೋಡಿದರೆ ಧಾರವಾಡ ಜಿಲ್ಲೆಯಲ್ಲಿ ೪ತಾಲೂಕುಗಳಲ್ಲಿ ಬರಗಾಲ ಆಪರಿಸಿದೆ. ಅಲ್ಲಿ ೯ ಬೋರ್‌ವೆಲ್‌ಗಳನ್ನು ಹಾಕಿದ್ದರೂ ಅವುಗಳ ಪೈಕಿ ಒಂದಕ್ಕೂ ಪಂಪ್ ಹಾಕಿಲ್ಲ. ಇಲ್ಲಿ ಕೆಲಸ ಮಾಡ ತಕ್ಕದ್ದು ಒಂದೇ ಒಂದು ರಿಗ್. ಇದನ್ನು ನೋಡಿದರೆ ನಮ್ಮ ಭಾಗವನ್ನು ಸರ್ಕಾರದವರು ಬಹಳವಾಗಿ ನಿರ್ಲಕ್ಷಿಸಿದ್ದಾರೆಂದು ಕಂಡುಬರುತ್ತದೆ. ಮೈಸೂರು ಜಿಲ್ಲೆಯಲ್ಲಿ ೪ ತಾಲೂಕುಗಳಿದ್ದರೆ ೬೬ ಬೋರ್ ಗಳನ್ನು ಹಾಕಿದ್ದಾರೆ ೨೨೪ ಪಂಪ್‌ಸೆಟ್‌ಗಳನ್ನು ಕೂಡಿಸಿ ರಿಪೇರಿ ಮಾಡಿದ್ದಾರೆ. ಆದರೆ ನಮ್ಮಲ್ಲಿ ಏನೂ ಮಾಡಿಲ್ಲ. ಇದಕ್ಕಾಗಿ ನಾನು ರೂರಲ್ ಡೆವೆಲಪ್‌ಮೆಂಟ್ ಸಚಿವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಅದರಲ್ಲೂ ಬರಗಾಲಕ್ಕೆ ತುತ್ತಾಗಿರತಕ್ಕ ಕಡೆ ಎಲ್ಲೆಲ್ಲಿ ಬೋರ್‌ವೆಲ್‌ಗಳನ್ನು ಹಾಕುತ್ತೀರಿ ಅಲ್ಲೆಲ್ಲಾ ತೀವ್ರಗತಿಯಿಂದ ಪಂಪ್‌ಸೆಟ್‌ಗಳನ್ನು ಹಾಕುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ವೈ. ಪಾಟೀಲ್ (ಅಫಜಲ್‌ಪುರ).—ಸ್ವಾಮಿ ಅಧ್ಯಕ್ಷರೆ, ಅಫಜಲ್‌ಪುರ ತಾಲೂಕಿನಲ್ಲಿ ಸಾದನೂರು, ಚಿನ್ನಮುಳ್ಳಿ, ಡಾಕಳಿ, ಉಮ್ಮರಗ, ಕುಷ್ಟಗಿ ಎಂಬ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಜಾಸ್ತಿಯಾಗಿದೆ. ಅಲ್ಲಿ ಎಷ್ಟು ಬೋರವೆಲ್‌ಗಳನ್ನು ಹಾಕಿದರೂ ಅವು ಫೇಲ್ ಆಗಿವೆ. ಇದರ ಪಕ್ಕಕ್ಕೆ ಭೀಮಾ ನದಿ ಹರಿಯುತ್ತದೆ. ಇದರಿಂದ ಕುಡಿಯುವ ನೀರಿನ ಯೋಜನೆಯನ್ನು ತೆಗೆದುಕೊಂಡರೆ ಈ ೬ ಹಳ್ಳಿಗಳಿಗೂ ನೀರಿನ ವ್ಯವಸ್ಥೆಯಾಗುತ್ತದೆ. ಸುಮಾರು ೧೦–೧೫ ಲಕ್ಷ ರೂಪಾಯಿಗಳಲ್ಲಿ ಈ ಕಾರ್ಯ ಸಾಧನೆಯಾಗುತ್ತದೆ. ಅಫ್‌ಜಲ್‌ಪುರ ಟೌನ್‌ನಲ್ಲಿ ಉಂಟಾಗಿರತಕ್ಕ ಕುಡಿಯುವ ನೀರಿನ ತೊಂದರೆಯನ್ನು ಪರಿಹರಿಸುವ ಕಡೆಗೆ ಸರ್ಕಾರದವರು ಯೋಚನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಾಚೇಗೌಡ (ಹೊಸಕೋಟೆ).—ಬೆಂಗಳೂರು ಜಿಲ್ಲೆಯಲ್ಲಿ ಪೊಸಿಷನ್ ಆಫ್ ರಿಗ್ಸ್ ಎಂಬುದರಲ್ಲಿ ೬ ಎಂದು ತೋರಿಸಿದ್ದೀರಿ, ನಂಬರ್ ಆಫ್ ರಿಗ್ಸ್ ವರ್ಕಿಂಗ್ ಎಂಬುದರಲ್ಲಿ ೩ ಎಂದು ತೋರಿಸಿದ್ದೀರಿ. ತಾಲೂಕ್ಸ್ ಎಫೆಕ್ಟೆಡ್ ಎಂಬುದರಲ್ಲಿ ೪ನ್ನು ತೋರಿಸಿದ್ದೀರಿ. ಇದರಲ್ಲಿ ಈ ರಿಗ್ಸ್ ಎಲ್ಲೆಲ್ಲಿವೆ ಎಂಬುದು ಗೊತ್ತಾಗುತ್ತಿಲ್ಲ. ಪ್ರೈವೇಟ್ ರಿಗ್ಸ್‌ನ್ನು ತೆಗೆದುಕೊಳ್ಳಿ ಎಂದು ಸರ್ಕಾರದವರು ನಮಗೆ ಹೇಳಿದ್ದಾರೆ. ಆದರೆ ಅದಕ್ಕೆ ರೇಟು ಜಾಸ್ತಿ ಮಾಡಿಕೊಡಬೇಕಾಗುತ್ತದೆ. ಏಕೆಂದರೆ ಅಪ್ರೂವ್ಡ್ ರೇಟಿಗೆ ಅವರು ಕೆಲಸ ಮಾಡುವುದಿಲ್ಲ. ಆದ್ದರಿಂದ ಸರ್ಕಾರದವರು ಇದಕ್ಕಾಗಿ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

೮.೦೦ ಪಿ.ಎಂ.

ಶ್ರೀ ಅಂಬಣ್ಣ ನಾಯಕ ದೊರೈ ಆರ್. (ಮಾನ್ವಿ).—ಮಾನ್ಯ ಅಧ್ಯಕ್ಷರೇ ನಮ್ಮ ಕ್ಷೇತ್ರವಾದ ರಾಯಚೂರು ಜಿಲ್ಲೆ, ದೇವದುರ್ಗ, ಕುಷ್ಟಗಿ, ಈ ಪ್ರದೇಶಗಳು ವಿಪರೀತವಾದ ಬರಗಾಲ ಪರಿಸ್ಥಿತಿಗೆ ತುತ್ತಾಗಿದೆ. ಅದೇ ಪ್ರಕಾರವಾಗಿ ಮಾನ್ವಿ ಕಾನ್‌ಸ್ಟಿಟ್ಯುನ್ಸಿಯನ್ನು ಎರಡು ರೆವಿನ್ಯೂ ಸರ್ಕಲ್‌ಗಳಲ್ಲೂ ಸಹಾ ನೀರಿನ ಕೊರತೆಯಿಂದಾಗಿ ತೀವ್ರ ಅಭಾವವನ್ನು ಜನರು ಎದುರಿಸಬೇಕಾಗಿರುತ್ತದೆ. ಈ ಪ್ರದೇಶಗಳಲ್ಲಿ ತೀವ್ರವಾಗಿ ನೀರಿನ ಅವಶ್ಯಕತೆ ಇರುತ್ತದೆ. ಈಗಾಗಲೇ ಮಾನ್ಯ ಸೆ ಹಿತರನೇಕರು ಇದರಬಗ್ಗೆ ವಿವರಿಸಿದ್ದಾರೆ. ಆ ಅಭಾವವನ್ನು ನೀಗಿಸುವ ಸಲುವಾಗಿ ತಮಿಳುನಾಡಿನಿಂದ ರಿಜಿಸ್ಟರ್ ಮಾಡಿಸಿಕೊಂಡ ಖಾಸಗಿ ರಿಗ್ಸ್‌ಗಳನ್ನು ವಾಪಸ್ ಕಳುಹಿಸಿಕೊಡುತ್ತಿರುವುದರಿಂದ ಮತ್ತಷ್ಟು ತೊಂದರೆಯನ್ನು ಪಡಬೇಕಾದ ಸಂದರ್ಭಗಳು ಉಂಟಾಗುತ್ತಿವೆ. ೧೯೭೨ರಲ್ಲಿ ಗುಲ್ಬರ್ಗಾ ಕ್ಷೇತ್ರದಲ್ಲಿ ಬರಗಾಲ ಉಂಟಾದಾಗ ಆಂಧ್ರ ಪ್ರದೇಶದಿಂದ ಖಾಸಗಿ ರಿಗ್ಸ್‌ಗಳನ್ನು ತರಿಸಲಾಗಿತ್ತು. ಅದೇ ಪ್ರಕಾರವಾಗಿ ಈಗಲೂ ಕೂಡ ಬೇರೆ ಬೇರೆ ಕಡೆಗಳಿಂದ ಖಾಸಗಿ ರಿಗ್ಸ್‌ಗಳನ್ನು ತರಿಸತಕ್ಕಂಥದ್ದು ಬಹಳ ಅವಶ್ಯಕತೆ ಇರುತ್ತದೆ. ಇದನ್ನು ಸರ್ಕಾರದವರು ಆದಷ್ಟು ಜಾಗ್ರತೆ ತರಿಸಲು ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಬೋರ್‌ವೆಲ್‌ಗಳು ತೆಗೆದಿರುವ ಕಡೆ ಕೆಲವೊಂದು ಉಪಯೋಗವಾಗುತ್ತಿಲ್ಲ. ಒಂದು ರೀತಿಯಾದ ಬ್ಲಾಕ್ ವಾಟರ್ ಬರುತ್ತದೆ. ಅದನ್ನು ತೆಗೆಸತಕ್ಕಂಥ ವ್ಯವಸ್ಥೆಯನ್ನು ಮಾಡಿ ಶುದ್ಧವಾದ ನೀರು ದೊರೆಯು ವಂತೆ ಮಾಡಬೇಕು. ಈಗ ಬಂದಿರತಕ್ಕಂಥ ಎಲ್ಲ ರಿಗ್ಸ್ ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ಅನೇಕ ಜನ ಸದಸ್ಯರು ದೂರನ್ನು ಮಾಡಿರುತ್ತಾರೆ. ಒಂದು ಕಡೆ ಬೋರ್‌ವೆಲ್‌ನ್ನು ತೆಗೆದಿದ್ದು ಮತ್ತೊಂದು ಕಡೆ ಬೋರ್‌ವೆಲ್‌ನ್ನು ತೆಗೆದಾಗ ಇಲ್ಲಿದ್ದಂಥ ನೀರು ಅಲ್ಲಿಗೆ ಹೋಗತಕ್ಕಂಥ ಸಂದರ್ಭಗಳೂ ಇರುತ್ತವೆ. ಇಂಥ ಒಂದು ವ್ಯವಸ್ಥೆ ಆಗದಂತೆ ನೋಡಿಕೊಳ್ಳಬೇಕೆಂದೂ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಕೆಲವೊಂದು ಕಡೆ ಜಿಯೋಫಿಸಿಸ್ಟ್ ವ್ಯವಸ್ಥೆ ಇಲ್ಲದ ಕಾರಣ ಗ್ರ್ಯಾಂಟನ್ನು ತೆಗೆದುಕೊಳ್ಳಲಿಕ್ಕೆ ಆತಂಕ ಉಂಟಾ

ಗಿರುತ್ತದೆ. ಎಲ್ಲೆಲ್ಲಿ ಇವರುಗಳ ಅವಶ್ಯಕತೆ ಇದಿಯೋ ಅಲ್ಲಲ್ಲಿ ಭರ್ತಿಮಾಡತಕ್ಕಂಥ ವ್ಯವಸ್ಥೆಯಾಗ ಬೇಕು. ಬೋರ್‌ವೆಲ್‌ಗಳನ್ನು ಮಂಜೂರು ಮಾಡಬೇಕಾದಲ್ಲಿ ಸರ್ಕಾರಕ್ಕೆ ಬಂದು ಅಲ್ಲಿ ಆಪ್ರೂವ್ ಆಗ ತಕ್ಕಂಥ ಒಂದು ವ್ಯವಸ್ಥೆ ಇರುತ್ತದೆ. ಇದರಲ್ಲಿ ಸ್ವಲ್ಪ ಮಟ್ಟಿನ ಸಡಿಲತೆಯನ್ನು ಮಾಡಿದರ ಜನತೆಗೆ ಸ್ವಲ್ಪ ಮಟ್ಟಿನ ಅನುಕೂಲವಾಗುತ್ತದೆ, ಕೆಲವುಕಡೆ ಬೋರ್‌ವೆಲ್‌ಗಳನ್ನು ತೆಗೆಸಿರುತ್ತಾರೆ. ಆದರೆ ಅವುಗಳ ಮೇಂಟ್ಸೆನೆನ್ಸ್ ಸರಿಯಾಗಿ ಇರುವುದಿಲ್ಲ. ಆದ್ದರಿಂದ ಸರ್ಕಾರದವರು ಇಷ್ಟೆಲ್ಲ ವಿರ್ಚುಮಾಡಿ, ವ್ಯಯಮಾಡಿ ಅವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳದಿದ್ದರೆ ಅದರಿಂದ ಯಾವ ಉಪಯೋಗವೂ ಆಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ನಾನು ಹೇಳುವುದೇನೆಂದರೆ ತಮ್ಮ ಕ್ಷೇತ್ರಕ್ಕೆ ತಕ್ಷಣಕ್ಕೆ ಏನು ಸೌಕರ್ಯ ಬೇಕಾಗಿರುತ್ತದೋ ಅದರಬಗ್ಗೆ ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಅಂಬಣ್ಣ ನಾಯಕ ದೊರೆ ಆರ್.—ಅಕ್ವಡೆಟ್ ಪ್ರಾಬ್ಲಮ್ ಪ್ರಾಧಾನ್ಯವಾಗಿ ನಮ್ಮ ಕಡೆ ಇರುತ್ತದೆ. ಅದರಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಬೇಗಾನೆ ರಾಮಯ್ಯ ಅಂದರೆ ಎಲ್ಲ ಬಂದುಬಿಡುತ್ತದೆ.

ಶ್ರೀ ಗಂಗಣ್ಣ ಭೀಮಪ್ಪ (ಕುಷ್ಟಗಿ)—ಸನ್‌ಮಾನ್ಯ ಅಧ್ಯಕ್ಷರೇ ನೀರಿನ ಕೊರತೆಯ ಬಗ್ಗೆ ಅನೇಕ ಜನ ಸದಸ್ಯರು ಈಗಾಗಲೇ ಮಾತನಾಡಿದ್ದಾರೆ. ಅದಕ್ಕೆ ಉತ್ತರ ನಗರಾಭಿವೃದ್ಧಿ ಸಚಿವರೂ ಹಾಗೂ ಪಂಚಾಯತಿರಾಜ್ಯ ಸಚಿವರು ಕೊಟ್ಟಿರುತ್ತಾರೆ. ನಿಜವಾಗಿಯೂ ಹೇಳಬೇಕಾದರೆ ನನ್ನ ಗ್ರಾಮ ಮುನಸೀಪಲ್ ಪ್ರದೇಶಕ್ಕೆ ಬರುತ್ತದೆ. ಬೆಳಿಗ್ಗೆಯಿಂದ ಸತತವಾಗಿ ಮೂರು ಗಂಟೆಗಳ ಕಾಲ ನೀರಿಗಾಗಿ ಕಾದುನಿಂತರೂ ಒಂದು ಕೊಡ ನೀರು ದೊರೆಯುವುದು ದುರ್ಲಭ. ಇಂಥ ಒಂದು ಪರಿಸ್ಥಿತಿ ಇರತಕ್ಕಂಥ ಊರಲ್ಲಿ ನನ್ನ ಮನೆ ಇದ್ದು ಅಲ್ಲಿಂದ ಬೆಂಗಳೂರು ಪಟ್ಟಣಕ್ಕೆ ಬಂದು ಮತ್ತೆ ನನ್ನ ಊರಿಗೆ ಹೋಗ ಬೇಕೆಂದರೆ ಹೇಗೆ ಹೋಗುವುದು ಎಂದು ಚಿಂತನೆ ಮಾಡತಕ್ಕಂಥ ಪರಿಸ್ಥಿತಿ ಇರುತ್ತದೆ. ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ಕೆಲಸ ಮಾಡತಕ್ಕಂಥ ಪ್ರೊಫೆಸರ್ ಚನ್ನಬಸವಯ್ಯನವರು ನಮ್ಮ ವಿನಂತಿ ಮೇರೆಗೆ ನಮ್ಮ ತಾಲ್ಲೂಕಿನ ಎಲ್ಲ ಭಾಗಗಳನ್ನು ಸುತ್ತಿ ನೀರು ಎಲ್ಲೆಲ್ಲಿ ದೊರೆಯುತ್ತದೆ ಎನ್ನುವುದನ್ನು ಹೇಳಿರುತ್ತಾರೆ. ಮತ್ತೆ ಹದಿಮೂರು ತಾಲ್ಲೂಕುಗಳಲ್ಲಿ ನೀರು ದೊರೆಯುವುದೇ ಇಲ್ಲವೆಂದೂ ಕೂಡ ಸ್ಪಷ್ಟವಾಗಿ ಹೇಳಿರುತ್ತಾರೆ. ಮಾನ್ಯ ಪ್ರೊಫೆಸರ್ ಚನ್ನ ಬಸವಯ್ಯನವರು ಎಲ್ಲೆಲ್ಲಿ ನೀರು ದೊರೆಯುತ್ತದೆಂದು ಹೇಳಿರುತ್ತಾರೋ ಅಲ್ಲೆಲ್ಲ ತೆಗೆಯುವುದಕ್ಕೆ ಅಧಿಕಾರವಿಲ್ಲವೆಂದು ಜಿಯಾಲಜಿಸ್ಟ್ ಹೇಳುತ್ತಾರೆ. ಸರ್ಕಾರದವರು ಈಗ ಎಷ್ಟು ಬೋರ್‌ವೆಲ್‌ಗಳನ್ನು ತೆಗೆಯಬೇಕೆಂದು ಆಜ್ಞೆಯನ್ನು ಕೊಟ್ಟಿರುತ್ತಾರೋ ಅಷ್ಟನ್ನು ಮಾತ್ರ ತೆಗೆಯಲು ಸಾಧ್ಯವೆಂದು ಹೇಳು ತ್ತಿರುತ್ತಾರೆ. ಆದ್ದರಿಂದ ಸರ್ಕಾರದವರು ಪ್ರೊಫೇಸರ್ ಚನ್ನಬಸವಯ್ಯನವರು ಹೇಳಿರುವಂತೆ ಬೋರ್ ವೆಲ್‌ಗಳನ್ನು ತೆಗೆಯಲು ಅನುಮತಿಯನ್ನು ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಅವರು ಒಬ್ಬರೇ ೨೬ ಸಾವಿರ ಹಳ್ಳಿಗಳನ್ನು ಸುತ್ತಿ ಬರುವುದಕ್ಕೆ ಸಾಧ್ಯವೇ?

ಶ್ರೀ ಗಂಗಣ್ಣ ಭೀಮಪ್ಪ.—ರಾಯಚೂರು ಜಿಲ್ಲೆಯಲ್ಲಿ ಅವರು ಹೇಳಿದ ಕಡೆ ಎಲ್ಲ ಸಕ್ಸಸ್‌ಫುಲ್ ಆಗಿರುತ್ತದೆ. ನಮ್ಮ ಕಡೆ ೬೦ ಹ್ಯಾಂಡ್ ಪಂಪ್‌ಗಳಿಗೆ ಕೇವಲ ೧೮ನ್ನು ಮಾತ್ರ ಅಳವಡಿಸಿರುತ್ತಾರೆ. ಉಳಿಕೆಯವನ್ನೂ ಕೂಡ ಅದಷ್ಟು ಜಾಗ್ರತೆಯಾಗಿ ಹ್ಯಾಂಡ್ ಪಂಪ್ಸ್ ಕೂಡಿಸಲು ಕ್ರಮ ತೆಗೆದುಕೊಳ್ಳ ಬೇಕೆಂದು ಹೇಳುತ್ತೇನೆ. ಹಿಂದೆ ೧೯೭೩-೭೪ರಲ್ಲಿ ಬರಗಾಲ ಬಂದಹಾಗೆ ಈ ವರ್ಷವೂ ಸಹ ಭೀಕರ ಬರಗಾಲಕ್ಕೆ ನಮ್ಮ ಪ್ರದೇಶ ತುತ್ತಾಗಿರುತ್ತದೆ. ಆದ್ದರಿಂದ ಮಾನ್ಯ ಸಚಿವರಲ್ಲಿ ಪ್ರಾರ್ಥಿಸಿಕೊಳ್ಳುವು ದೇನೆಂದರೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿರುವ ಈ ಪ್ರದೇಶಕ್ಕೆ ಒಂದು ಶಾಶ್ವತವಾದ ನೀರಿನ ಕೊರತೆ ಯನ್ನು ನೀಗುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸು ತ್ತೇನೆ.

ಶ್ರೀ ಬಿ. ರಾಮಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರನೇಕರು ವಿವಿಧ ರೀತಿಯಲ್ಲಿ ಸಲಹೆ ಗಳನ್ನು ಕೊಟ್ಟಿರುತ್ತಾರೆ. ಅವಕ್ಕೆಲ್ಲ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರು ಹೇಳಿರತಕ್ಕಂಥ ಎಲ್ಲ ಸಮಸ್ಯೆಗಳ ಬಗ್ಗೆಯೂ ಪ್ರಾಮಾಣಿಕವಾದ ಪ್ರಯತ್ನ ಮಟ್ಟಿದ್ದೇನೆ ನಿಜವಾಗಿಯೂ ನಮ್ಮಲ್ಲಿರತಕ್ಕಂಥ ೯೦ ರಿಗ್ಸ್‌ನಲ್ಲಿ ಏನು ಇರುತ್ತವೆ ಅದರ ಬಗ್ಗೆ ಒಂದೇ ಮಾತಿನಲ್ಲಿ ಮಾನ್ಯ ಸದಸ್ಯರಿಗೆ

ಹೇಳುವುದೇನೆಂದರೆ, ಇವುಗಳಲ್ಲಿ ಸಾಮಾನ್ಯವಾಗಿ ಮದ್ರಾಸ್‌ನಿಂದ ತರಿಸಿರತಕ್ಕಂಥ ಪಾಸಗಿ ರಿಗ್ಸ್‌ಗಳಾಗಿರುತ್ತವೆ. ಇವುಗಳಲ್ಲಿ ಕೆಲವು ರಿಗ್ಸ್ ಕೆಲಸಮಾಡದೆ ಕೆಟ್ಟಿರುತ್ತವೆ. ಕೇಂದ್ರ ಸರ್ಕಾರಕ್ಕೂ ಕೂಡ ಇನ್ನೂ ರಿಗ್ಸ್ ಬೇಕೆಂದು ಇಂಡೆಂಟ್ ಮಾಡಿರುತ್ತೇವೆ. ಏಳು ರಿಗ್ಸ್‌ಗಳನ್ನು ತಕ್ಷಣ ಕಳುಹಿಸಿಕೊಡುತ್ತೇವೆಂದು ಹೇಳಿರುತ್ತಾರೆ. ಸುಮಾರು ನಾವು ೨೦ ರಿಗ್ಸ್‌ಗಳಿಗೆ ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದೇವೆ ಅಧ್ಯಕ್ಷರೇ ಇಲ್ಲಿ ಮಾನ್ಯ ಸದಸ್ಯರು ಎಲ್ಲರೂ ಇರುವುದರಿಂದ ಅವರೆಲ್ಲರೂ ದಯವಿಟ್ಟು ಗಮನಿಸಬೇಕೆಂದು ಹೇಳುತ್ತೇನೆ. ಕೊಳವೆ ಬಾವಿಗಳನ್ನು ತೆಗೆಯುವುದು ಸರ್ಕಾರದ ಜವಾಬ್ದಾರಿ, ಸರ್ಕಾರದ ಕೆಲಸವಾಗಿದ್ದರೂ ಅದರಲ್ಲಿ ಒಂದೇ ಒಂದು ವಾಷರ್ ಇರುತ್ತದೆ. ಆ ವಾಷರ್‌ಗೆ ೧೬ ರೂಪಾಯಿಗಳು ಆಗಬಹುದು. ಆಕಸ್ಮಾತ್ತಾಗಿ ಅದೇನಾದರು ಕೆಟ್ಟಿದ್ದರೆ ಅದನ್ನು ಮತ್ತೆ ಬದಲಾಯಿಸಿಕೊಳ್ಳಬೇಕು. ಅದನ್ನು ಬದಲಾಯಿಸಿಕೊಳ್ಳದಿದ್ದರೆ ಸರಿಯಾಗಿ ನೀರನ್ನು ಎತ್ತುವ ಕೆಲಸ ಮಾಡುವುದಿಲ್ಲ ಅದಕ್ಕಾಗಿಯೇ ಒಬ್ಬ ಮೆಕಾನಿಕ್ ಮತ್ತು ಮೊಬಾಯಿಲ್ ಯೂನಿಟ್‌ನ್ನು ಇಟ್ಟಿರುತ್ತೇವೆ. ಎಲ್ಲೆಲ್ಲಿ ಬೋರ್‌ವೆಲ್‌ಗಳು ಕೆಟ್ಟಿರುತ್ತವೆ, ಅವರು ಈ ಮೊಬಾಯಿಲ್ ಯೂನಿಟ್‌ನವರಿಗೆ ತಿಳಿಸಿದರೆ ಅವರು ಬಂದು ರಿಪೇರಿ ಮಾಡತಕ್ಕಂಥ ಒಂದು ವ್ಯವಸ್ಥೆ ಇದೆ. ಕೊಳವೆ ಬಾವಿಗಳನ್ನು ತೆಗೆದಾಕ್ಷಣ ಎಲ್ಲ ಆಯಿತು ಎಂದಲ್ಲ. ಲೋಪದೋಷಗಳು ಏನಾದರೂ ಕಡ್ಡಾಯವಾಗಿ ಆಯಾ ಪ್ರದೇಶದ ಜನರೂ ಸಹ ಸಹಕರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಅತ್ಯಂತ ಶೀಘ್ರಗತಿಯಿಂದ ಇದರ ಬಗ್ಗೆ ಗಮನಹರಿಸಿದ್ದೇವೆ. ಸುಮಾರು ೭೫ ಲಕ್ಷ ರೂಪಾಯಿಯನ್ನು ಗುಲ್ಬರ್ಗ ಭಾಗದಲ್ಲಿ ಕೊಡಲಾಗಿದ್ದು ಈಗಾಗಲೇ ಜಿಲ್ಲಾಧಿಕಾರಿಗಳವರಿಗೆ ಆದೇಶ ಕೊಟ್ಟು ಎಲ್ಲೆಲ್ಲಿ ಆಗತ್ಯ ಇದೆ ಅಲ್ಲಲ್ಲಿ ತೆಗೆಯತಕ್ಕ ಸ್ವಾತಂತ್ರ್ಯವನ್ನು ಅವರಿಗೆ ಕೊಟ್ಟಿದ್ದೇವೆ. ಡಿಪಾರ್ಟ್‌ಮೆಂಟ್‌ನವರಿಂದ ಈ ರಿಗ್ಸ್‌ಗಳನ್ನು ಅವರ ಸ್ವಾಧೀನದಲ್ಲಿ ಬಿಟ್ಟು ಈ ಕೆಲಸ ಮಾಡಿಸುತ್ತಿದ್ದೇವೆ. ಅಲ್ಲಿ ಸ್ಕೇರ್‌ಸಿಟಿ ಫಂಡ್‌ನಿಂದ ಎಲ್ಲಲ್ಲಿ ನೀರು ಸಿಗುತ್ತದೆ ಅಲ್ಲೆಲ್ಲಾ ಸ್ಕೇರ್‌ಸಿಟ ವರ್ಕ್ಸ್ ಮಾಡುವುದಕ್ಕೆ ಹೇಳಿದ್ದೇವೆ. ಒಂದು ತಿಂಗಳ ಕೆಳಗೆ ನಾನೂ ಮತ್ತು ಮಾನ್ಯ ರೆವಿನ್ಯೂ ಸಚಿವರು ೧೯ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜೊತೆ ಕುಳಿತುಕೊಂಡು ಕೇಳಿದಾಗ ಗಾ ಪಾಂತರ ಪ್ರದೇಶದ ಕುಡಿಯುವ ನೀರಿನ ವಿಷಯ ಅತ್ಯಂತ ತೃಪ್ತಿಕರವಾಗಿದೆಯೆಂದು ಹೇಳಿ ಹೋಗಿದ್ದಾರೆ. ಅದನ್ನೆಲ್ಲಾ ನಾನು ಗಮನಿಸುತ್ತಿದ್ದೇನೆ. ಇನ್ನು ಈ ವ್ಯವಸ್ಥೆ ಮಾಡುವಾಗ ಅಲ್ಲಲ್ಲಿ ಸ್ವಲ್ಪ ಲೋಪದೋಷಗಳಾಗಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ ನಮ್ಮ ಪ್ರಯತ್ನದ ಜೊತೆಗೆ ನಿಮ್ಮ ಒಂದು ಸಹಕಾರವೂ ಬೇಕೆಂದು ಹೇಳಿ ಆದಷ್ಟು ಬೇಗ ಈ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ಎಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್.ಡಿ. ಚೌಡಯ್ಯ.—ಮಂಡ್ಯ ಜಿಲ್ಲೆಯಲ್ಲಿ ಒಂದೂ ಇಲ್ಲವಲ್ಲಾ ಅದಕ್ಕೆ ಏನುಹೇಳುತ್ತೀರಿ? ತಾವು ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಪ್ರಕಾರವೇ ಒಂದೂ ಇಲ್ಲವಲ್ಲಾ ಅದಕ್ಕೆ ಏನು ಹೇಳುತ್ತೀರಿ?

ಅಧ್ಯಕ್ಷರು.—ಮಾನ್ಯ ಕೆಂಗೇಗೌಡರೂ ಸಹ ಹೇಳಿದರು ಮೈಸೂರು ಜಿಲ್ಲೆಯಲ್ಲಿ.....

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎಲ್ಲೆಲ್ಲಿ ಸಾಧ್ಯ ಇದೆ ಅಲ್ಲೆಲ್ಲಾ ನೋಡಿ ಮಾಡಿಸುತ್ತೇನೆ ಎಂದು ಮಾನ್ಯ ಮಂತ್ರಿಗಳು ಆಗಲೇ ಹೇಳಿದರಲ್ಲಾ ?

ಶ್ರೀ ಬೇಗಾನೆ ರಾಮಯ್ಯ.—ಮಂಡ್ಯಾದಲ್ಲಿ ಮೊನ್ನೆಯವರೆಗೆ ೪ ರಿಗ್ಸ್ ಇದ್ದವು. ನಿನ್ನೆ ..ಹುಶಃ ಮದ್ರಾಸ್‌ನಿಂದ ಬಂದಂತಹ ನಮ್ಮಲ್ಲಿ ರಿಜಿಸ್ಟ್ರೇಷನ್ ಆಗಿರತಕ್ಕಂತಹ ರಿಗ್ಸ್‌ಗಳನ್ನು ವಾಪಸ್ಸು ಕಳುಹಿಸಬೇಕು ಎನ್ನುವ ಆದೇಶ ಬಂದಮೇಲೆ ಒಂದೆರಡು ರಿಗ್ಸ್ ವಾಪಸ್ ಹೋಗಿರಬಹುದು. ಎಷ್ಟು ಇದೆ ಎನ್ನತಕ್ಕದನ್ನು ಅತ್ಯಂತವಾಗಿ ಕನ್ಸಿಡರ್ ಮಾಡಿ ಈಗಲೇ ಅದನ್ನು ಪರಿಶೀಲನೆ ಮಾಡಿಸುತ್ತೇನೆಂದು ನಾನು ಆಗಲೇ ಹೇಳಿದ್ದೇನೆ.

ಶ್ರೀ ಎಚ್.ಡಿ. ಚೌಡಯ್ಯ.—ಒಂದೂ ಕೂಡಾ ಇಲ್ಲ ಸ್ವಾಮಿ.

ಶ್ರೀ ಬೇಗಾನೆ ರಾಮಯ್ಯ.—ಬಹುಶಃ ಇವತ್ತು ಗೊತ್ತಾಗಬಹುದು. ಪ್ರೈವೇಟ್ ರಿಗ್ಸ್ ಮದ್ರಾಸ್‌ಗೆ ಹೋಗಿರಬಹುದು. ಅಲ್ಲಿಗೆ ರಿಗ್ಸ್ ಕಳುಹಿಸುವ ವ್ಯವಸ್ಥೆ ಮಾಡುತ್ತೇನೆಂದು ನಾನು ಹೇಳುತ್ತಿದ್ದೇನೆ. ಇನ್ನು ಮಾನ್ಯ ಕೆಂಗೇಗೌಡರು ಹೇಳಿದ್ದನ್ನು ತಿಳಿದುಕೊಂಡಿದ್ದೇನೆ. ಆಲ್ಲಿ ಪರಿಸಿ ತಿ ಏನಿದೆ ಅದನ್ನು ಸರಿಪಡಿಸುತ್ತೇನೆ.

ಶ್ರೀ ಜಿ. ಜಯದೇವರಾಜ ಅರಸ್.—ತಾವು ಆ ಭಾಗದಲ್ಲಿ ೧೦ ತಾಲ್ಲೂಕುಗಳಲ್ಲಿ ಕ್ಷಾಮ ಇದೆ ಎಂದು ಒಪ್ಪಿಕೊಂಡಿದ್ದೀರಿ. ಈಗ ತಾವು ಆ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಬೇಗಾನೆ ರಾಮಯ್ಯ.—೯೯ ರಿಗ್ಸ್‌ಗಳು ಸತತವಾಗಿ ಪ್ರಯತ್ನ ಮಾಡುತ್ತಿದ್ದು, ನಾವು ಈಗಾಗಲೇ ಎಂಜಿನಿಯರ್ಸ್‌ಗೆ ಆದೇಶವನ್ನು ಕೊಟ್ಟು ಎಲ್ಲಿ ಪ್ರೈವೇಟ್ ರಿಗ್ಸ್‌ಗಳು ಸಿಗಲಿ, ಅವುಗಳನ್ನು ಎಂಗೇಜ್ ಮಾಡಿಕೊಳ್ಳುವುದರ ಬಗ್ಗೆ ಆದೇಶ ಕೊಟ್ಟಿದ್ದೇವೆ. ರಿಗ್ಸ್‌ಗಳ ಬಗ್ಗೆ ಸತತವಾದ ಪ್ರಯತ್ನ ನಡೆಯುತ್ತಿದೆ.

Statement by the Chief Minister regarding Concession given to farmers

SRI R. GUNDU RAO.—Sir, I may be permitted to make the following statement.

Government are fully aware of the hardships and difficulties faced by the farmers due to various factors in recent times. In particular, the small and marginal farmers have been badly affected. The drought conditions which prevailed in many parts of the State last year further worsened the situation. Government are fully committed to helping the farmers to overcome such hardships, and have therefore announced a series of measures towards this end.

Betterment levy which was a levy on the land benefitted by irrigation works and collectable over a period of 20 years at the rate of not exceeding Rs. 75 per acre per year has now been abolished. As the members are aware the water rate which was sought to the substantially enhanced in the year 1978 has now been reduced. Having regard to the adverse seasonal conditions last year, Government have shown some concessions regarding recovery of co-operative dues wherever people have been badly affected by continuous drought. The beneficiaries of this move are the small and marginal farmers.

Land Revenue has been abolished on holdings upto 4 hectares of dry land or equivalent rain-fed wet land. The arrears of thakkavi loans which amounted to about Rs. 7 crores due from small and marginal farmers have been waived. Government have realised the importance of providing support price to the growers of essential food grains and other commodities and accordingly they have directed the Food and Civil Supplies Corporation to make the purchases at the minimum support price to avoid distress sale of farm produce by the farmers.

Many other taxes and levies such as Sales Tax on fertilisers, taxes on use of tractors and trailers, and Agricultural Income-Tax have either been abolished or drastically reduced. Electricity charges on all irrigation pump sets upto 10 H.P. will now be charged at a flat rate of Rs. 50 per H.P. Government have made sufficient provision to ensure prompt payment on acquisition charges to the